


ಹಿಂದಿ ಮೂಲ: **ಅರ್ಚನಾ ಪೈನ್ಯೂಲಿ**
ಕನ್ನಡಕ್ಕೆ: **ಡಿ.ಎನ್. ಶ್ರೀನಾಥ್**
ಕಲೆ: ಎಚ್.ಎಸ್. ಮೋನಪ್ಪ

## ಕುಂಜಮ್ಮಾಳ ತ್ಯಾಗ-ಮಮತೆಯ ಜಗತ್ತು!

ರಾತ್ರಿಯ ಎರಡು ಗಂಟೆಗೆ ತಮ್ಮ ಮಗಳು ನೀಲ್‌ನ ಕೋಣೆಯಲ್ಲಿರುವುದನ್ನು ನೋಡಿ ಮೊಪ್ಪಿಲ್ಲಾ ದಂಪತಿಗಳ ಸಿಟ್ಟು ನೆತ್ತಿಗೇರಿತು. ಅವರ ಕಿರುಚಾಟ ಕೇಳಿ ನಾನು ಮತ್ತು ಅಪ್ಪ ಸಹ ಎಚ್ಚೆತ್ತೆವು. ತಡಬಡಿಸಿ ವರಾಂಡಕ್ಕೆ ಬಂದೆವು. ಸಕೀನಾ ಭಯದಿಂದ ತನ್ನ ಅಮ್ಮಿಯ ಹಿಂದೆ ನಿಂತು ಬಿಕ್ಕಳಿಸುತ್ತಿದ್ದಳು. ನೀಲ್‌ಗೆ ಆಕಾಶವೇ ಕಳಚಿ ಬಿದ್ದಂತಾಯಿತು. ಅವನ ಪರಿಸ್ಥಿತಿ, ಮಾಲು ಸಮೇತ ಸಿಕ್ಕಿಬಿದ್ದ ಕಳ್ಳನಂತಾಯಿತು. ಅವನು ತುಂಬಾ ಹೆದರಿದ್ದ. ಇಬ್ಬರೂ ಪರಸ್ಪರ ಪ್ರೀತಿಸುತ್ತಾರೆ, ಜೊತೆಯಲ್ಲಿ ಅಡ್ಡಾಡುತ್ತಾರೆ, ಆದರೆ ಸಕೀನಾ ರಾತ್ರಿಯ ಎರಡು ಗಂಟೆಗೆ ನೀಲ್‌ನ ಕೋಣೆಗೆ ಬರುವಷ್ಟು ಅವರ ಪ್ರೇಮರೋಗ ಹೆಚ್ಚಿದೆ ಎಂಬುದು ನನಗೆ ತಿಳಿದಿರಲಿಲ್ಲ. ಎಲ್ಲರಿಗೂ ಆಶ್ಚರ್ಯವಾಗಿತ್ತು.

ಅಸರಫ್ ಅಂಕಲ್ ಅಪ್ಪನನ್ನು ನೋಡಿದ ಕೂಡಲೇ, 'ನೀವು ನಿಮ್ಮ ಮಗನನ್ನು ಹದ್ದುಬಸ್ತಿನಲ್ಲಿ ಇಡುತ್ತಿಲ್ಲ, ನಿಮ್ಮ ಅಯೋಗ್ಯ, ಅಲೆಮಾರಿ ಮಗ, ಬೇರೆಯವರ ಹೆಣ್ಣುಮಕ್ಕಳ ಮೇಲೆ ಕಣ್ಣು ಹಾಕುತ್ತಿದ್ದಾನೆ. ಅವನು ನಡುರಾತ್ರಿಯಲ್ಲಿ ಹುಡುಗಿಯರನ್ನು ತನ್ನ ಕೋಣೆಗೆ ಕರೆಯುತ್ತಿದ್ದಾನೆ' ಎಂದು ಗದರಿದರು.

